ಕರ್ನಾಟಕ ಸರ್ಕಾರ

ಸಂಖ್ಯೆ:ಕಾಶಿಇ:06:ಮಾತಂವಿ:2016-17/ಖ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 19 -07-2018

**ಸುತ್ತೋಲೆ**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪದವಿ ಕಾಲೇಜುಗಳ ಬೋಧಕ / ಬೋಧಕೇತರರ ನೌಕರರ ವೇತನ ಹಾಗೂ ವೇತನ ಬಾಕಿ ಇತ್ಯಾದಿಗಳನ್ನು ಇ.ಸಿ.ಎಸ್. ಮುಖಾಂತರ ಸೆಳೆಯುವ ಬಗ್ಗೆ.

***

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆಲವು ಕಾಲೇಜುಗಳ ಪ್ರಾಂಶುಪಾಲರು ವೇತನ ಹಾಗೂ ಇನ್ನಿತರೆ ವೇತನ ಭತ್ಯೆಗಳಿಗೆ ಸಂಬಂಧಿತ ವ್ಯವಹಾರಗಳನ್ನು ಚೆಕ್ ಮೂಲಕ ಹಣವನ್ನು ಸೆಳೆದು ಪ್ರಾಂಶುಪಾಲರ ಖಾತೆಗೆ ಜಮೆ ಮಾಡಿಕೊಂಡು ನಂತರ ಸಿಬ್ಬಂದಿಗಳಿಗೆ ಚೆಕ್ ಮೂಲಕ ವಿತರಿಸುತ್ತಿರುವುದು ತಿಳಿದು ಬಂದಿದೆ. ಇದರಿಂದ ಸಿಬ್ಬಂದಿಗಳಿಗೆ ನಿಗಧಿತ ಸಮಯದಲ್ಲಿ ವೇತನ ಬಟವಾಡೆ ಆಗದೇ ತೊಂದರೆಯಾಗುತ್ತಿದೆ. ಅಲ್ಲದೆ ಈ ಪದ್ಧತಿಯಿಂದ ಹಣದ ದುರುಪಯೋಗ ಆಗಿರುವ ಸನ್ನಿವೇಶಗಳು ಕಂಡು ಬಂದಿರುತ್ತದೆ. ಆದ್ದರಿಂದ ಇನ್ನು ಮುಂದೆ ಎಲ್ಲಾ ಕಾಲೇಜುಗಳ ಬಟವಾಡೆ ಅಧಿಕಾರಿಗಳು ಚೆಕ್ ಮೂಲಕ ಹಣವನ್ನು ವಿತರಿಸದೆ ಕಡ್ಡಾಯವಾಗಿ **"ಇ.ಸಿ.ಎಸ್"** (Electronic Clearing Service) ಮುಖಾಂತರವೇ ಹಣ ಸೆಳೆಯಲು ಸೂಚಿಸಿದೆ.

ಹೆಚ್.ಆರ್.ಎಂ.ಎಸ್.ನಲ್ಲಿ ECSನ್ನು ಅಳವಡಿಸಲು ಖಾತೆ ಹೊಂದಿರುವ ನೌಕರರ ಬ್ಯಾಂಕಿನ ವಿವರಗಳಾದ ಬ್ಯಾಂಕ್ ಪಾಸ್ ಪುಸ್ತಕದ ಮೊದಲಪುಟ ಅಥವಾ ಖಾಲಿ ಚೆಕ್ ಹಾಳೆಯ (ಜೆರಾಕ್ಸ್) ಪ್ರತಿಯನ್ನು ನೋಡಲ್ ಆಫೀಸರ್, ಹೆಚ್.ಆರ್.ಎಂ.ಎಸ್. ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಮುಖಾಂತರ ಸಲ್ಲಿಸಿದ್ದಲ್ಲಿ ಹೆಚ್.ಆರ್.ಎಂ.ಎಸ್.ನಲ್ಲಿ ECSನ್ನು ಅಳವಡಿಸಲು ಕ್ರಮಕೈಗೊಳ್ಳಲಾಗುವುದು.

ಇನ್ನು ಮುಂದೆ ಚೆಕ್ ಮೂಲಕ ವೇತನವನ್ನು ಬಡವಾಡೆ ಮಾಡುವ ಪ್ರಾಂಶುಪಾಲರುಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದು.

(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು(ಪ್ರ).

**ಪ್ರತಿ ರವಾನೆ:**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
2. ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು, ಸುತ್ತೋಲೆಯನ್ನು " ವೆಬ್ ಸೈಟ್ " ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

Suthaole